ಯಾಕೆ ಇಷ್ಟು ಅಲ್ಪಾಯುಷಿಯಾಗಿರುತ್ತವೆ?' ಎಂದು ತನ್ನನ್ನು ತಾನೇ ಪ್ರಶ್ನಿಸಿಕೊಳ್ಳುತ್ತಾನೆ. ಇದು ಇಡೀ ಚಿತ್ರ ನಮ್ಮಲ್ಲಿ ಹುಟ್ಟಿಸುವ ಪ್ರಶ್ನೆಯೂ ಹೌದು.

ಮಗನ ಸಾವಿನ ಸುದ್ದಿಯನ್ನು ಅಮ್ಮನಿಗೆ ತಲುಪಿಸಲು ಅವರೆಲ್ಲ ಕಾದಿದ್ದಾರೆ. ಅಮ್ಮ ಬರುತ್ತಾರೆ. 'ನಿಮ್ಮ ಮಗ ತೀರಿಹೋಗಿದ್ದಾನೆ. ಆತ್ಮಹತ್ಯೆ ಮಾಡಿಕೊಂಡಿದ್ದಾನೆ' ಎಂಬ ಸುದ್ದಿಗೆ ಅಮ್ಮ 'ಆತ್ಮಹತ್ಯೆ ಅಲ್ಲವೇ?' ಎಂದು ಕೇಳುತ್ತಾಳೆ; ಮೊದಲೇ ನಿರೀಕ್ಷಿಸಿದ್ದವಳಂತೆ. ನಂತರ ತಲೆತಗ್ಗಿಸಿ 'ಅವನ ಉದ್ದೇಶ, ಅವನ ಆಶೋತ್ತರಗಳನ್ನು ತಾಯಿಯಾಗಿ ನಾನು ಅರ್ಥ ಮಾಡಿಕೊಳ್ಳಲಿಲ್ಲ' ಎಂದು ಸುಮ್ಮನಾಗುತ್ತಾಳೆ. ಅಷ್ಟರಲ್ಲಿಯೇ ಪೊಲೀಸರು ಅಲ್ಲಿಗೆ ಬಂದು 'ನಿಮ್ಮ ಮಗ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ನಮಗೆ ಮಾಹಿತಿ ಬಂದಿದೆ. ಅದನ್ನು ತಿಳಿಸಿಹೋಗಲು ಬಂದಿದ್ದೇವೆ' ಎನ್ನುತ್ತಾರೆ.

ವ್ಯವಸ್ಥೆಗೆ, ಹರಿಯ ಸಾವು ಮನೆಯವರಿಗೆ ತಲುಪಿಸಬೇಕಾದ ಒಂದು ಮಾಹಿತಿ. ಆದರೆ ಪುರುಷನ್ ಮತ್ತು ಅವನ ಜತೆಗಾರರಿಗೆ ಅದು ಮಾಹಿತಿ ಅಲ್ಲ; ಸುದ್ದಿ. ಮಾಹಿತಿಗೂ ಸುದ್ದಿಗೂ ಪರಿಭಾವಿಸುವ ಕ್ರಮದಲ್ಲಿಯೇ ಇರುವ ವ್ಯತ್ಯಾಸವನ್ನು ತೆರೆದಿಡುವ ಮೂಲಕವೇ ನಿರ್ದೇಶಕರು ಜನಾಂದೋಲನಕ್ಕೂ ಪ್ರಭುತ್ವಕ್ಕೂ ಇರುವ ವ್ಯತ್ಯಾಸವನ್ನು ಕಾಣಿಸುತ್ತಾರೆ.

ಪ್ರಭುತ್ವ ಮತ್ತು ಆಂದೋಲನ ಎರಡೂ ಹುಟ್ಟುವುದು, ಬೆಳೆಯುವುದು ಜನರಿಂದಲೇ ತಾನೇ? ಅವರೆಡರೂ ತಮ್ಮ ಉದ್ದೇಶ ಜನರ ಒಳಿತು ಎಂದೇ ಪ್ರತಿಪಾದಿಸುತ್ತವೆ. ಆದರೂ ಅವೆರಡರ ನಡುವೆ ಎಂಥ ಅಂತರ! ಒಂದನ್ನು ಇನ್ನೊಂದು ಯಾಕೆ ಹತ್ತಿಕ್ಕಲು, ಅಧೀನದಲ್ಲಿಟ್ಟುಕೊಳ್ಳಲು, ಸರ್ವನಾಶ ಮಾಡಲು, ಆ ಮೂಲಕವೇ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಪ್ರಯತ್ನಿಸುತ್ತವೆ?

ಇಂಥ ಹಲವು ಪ್ರಶ್ನೆಗಳ ಜತೆಗೇ ಚಿತ್ರವನ್ನು ಮುಗಿಸುತ್ತಾರೆ ನಿರ್ದೇಶಕರು. ತನಗೆ ಮಗನ ಸಾವಿನ ಮಾಹಿತಿಯನ್ನು ಕೊಟ್ಟ ಪೊಲೀಸರಿಗೆ 'ನೀವು ನಿಮ್ಮ ಕರ್ತವ್ಯ ಮಾಡಿದ್ದೀರಿ. ನೀವಿನ್ನು ಹೊರಡಿ' ಎಂದು ಅವರ ಸಹಾಯಹಸ್ತವನ್ನು ತಿರಸ್ಕರಿಸಿ ಹರಿಯ ಸ್ನೇಹಿತರೊಟ್ಟಿಗೆ ಅಮ್ಮ ನಡೆಯುವುದೇ ಒಂದು ಗಟ್ಟಿ ರೂಪಕವಾಗಿದೆ. ಹಾಗೆಯೇ ನಿಂತು ಒಮ್ಮೆ ಹಿಂತಿರುಗಿ ನೋಡಿ ಕಣ್ಣೊರೆಸಿಕೊಳ್ಳುತ್ತಾಳೆ. ಈ ದೃಶ್ಯದಲ್ಲಿಯೂ ನಿರ್ದೇಶಕರು ಪ್ರೇಕ್ಷಕನನ್ನು ಆ ಕಣ್ಣೀರಿನಲ್ಲಿ ತಾದ್ಯಾತ್ಮ ಸಾಧಿಸಲು ಬಿಡುವುದಿಲ್ಲ. ನೀವು ನೋಡುತ್ತಿರುವುದು ಸಿನಿಮಾ ಎಂದು ಎಚ್ಚರಿಸಿಯೇ ಸಿನಿಮಾ ಮುಗಿಸುತ್ತಾರೆ. ಹಾಗೆ ಎಚ್ಚರಿಸಲು ಬಳಸಿಕೊಂಡ ತಂತ್ರವೂ ಇಡೀ ಕಥನಜಾಲವನ್ನು ಇನ್ನಷ್ಟು ಸಂಕೀರ್ಣವಾಗಿಸಿದೆ. ಹರಿಯ ಅಮ್ಮ ಜನರ ಜತೆ ನಡೆದುಕೊಂಡು ಹೋಗುತ್ತ ನಿಂತು ಕಣ್ಣೊರೆಸಿಕೊಳ್ಳುವ ದೃಶ್ಯವನ್ನು ಮತ್ತೆ ಪುನರಾವರ್ತಿಸುತ್ತಾರೆ. ಈಗ ಅದು ಪರದೆಯ ಮೇಲೆ ಎಂಬಂತೆ ಕಾಣುತ್ತದೆ. ಅದನ್ನು ಪುರುಷನ್‌ನ ಅಮ್ಮ ಮತ್ತು ಗೆಳತಿ ಕೂತು ನೋಡುತ್ತಿದ್ದಾರೆ. ನಂತರ ಸಿನಿಮಾ ಮುಗಿಯಿತು ಎಂಬಂತೆ ಎದ್ದು ನಡೆಯುತ್ತಾರೆ. ಆ ಕಥೆಗೆ ಅವರು ಪ್ರೇಕ್ಷಕರು. ಆದರೆ ನಮ್ಮ ಪಾಲಿಗೆ ಅವರೂ ತೆರೆಯ ಮೇಲಿನ ಸಿನಿಮಾದ ಕಲಾವಿದರು.

ಹಾಗಾದರೆ ಇಲ್ಲಿ ಸಿನಿಮಾ ಎನ್ನುವುದು ಪುರುಷನ್‌ನ ಅಮ್ಮ ನೋಡುತ್ತಿರುವುದಾ? ನಾವು ನೋಡುತ್ತಿರುವುದಾ? ಇಡೀ ಕಥನಕ್ಕೆ ಇರುವ ಎರಡು ಪದರಗಳನ್ನೂ ಬಿಡಿಸಿಟ್ಟು ಸಿನಿಮಾ ಮುಗಿಯುತ್ತದೆ. ಆ ಪದರಗಳ ನಡುವಿನ ಖಾಲಿ ಜಾಗದಲ್ಲಿ ಇಂದಿನ ನಮ್ಮ ಸುತ್ತಲಿನ ಹಲವು ಸಂಗತಿಗಳನ್ನು ತುಂಬಿಕೊಂಡು ಕಥನ ಮನಸ್ಸಿನೊಳಗೆ ಹೊಸದಾಗಿ ಬೆಳೆಯಲು ಶುರುವಾಗುತ್ತದೆ.

✿